ಝುವೇರಿಯವರ ಲಾಯರ್ ಆಗಿದ್ದವರು. ಅಲ್ಲಿ 21 ವರ್ಷ ಇದ್ದರು. ಆಶ್ರಮ ಕಟ್ಟಿದರು. ಸ್ಕೂಲ್ ಕಟ್ಟಿದರು. ಟಾಲ್‌ಸ್ಟಾಯ್ ಫಾರ್ಮ್ ಮಾಡಿದ್ದರು. ಪತ್ರಿಕೆ ಶುರುಮಾಡಿದರು. ಅವರ ಮಕ್ಕಳು ಅಲ್ಲೇ ಹುಟ್ಟಿದರು. ಆದರೆ ಅಲ್ಲಿನ ಬಹುಸಂಖ್ಯಾತ ಆಫ್ರಿಕನ್ನರ ಹೋರಾಟದ ಭಾಗವಾಗಿರಲಿಲ್ಲ. ಅಲ್ಲಿ ನಡೆದ ಬೋಯರ್ ಯುದ್ಧದಲ್ಲಿ ಸ್ಟ್ರೆಚರ್ ಬೇರರ್ ಆಗಿ ಕೆಲಸ ಮಾಡಿದರು. ಪರೋಕ್ಷವಾಗಿ ಬಿಳಿಯರಿಗೆ ಸಹಾಯ ಮಾಡಿದರು.

◆ **ನೀವು ನಿಮ್ಮ ಕನ್ನಡ ಬರಹವನ್ನು ಅಷ್ಟು ಮುಖ್ಯವಲ್ಲ ಅಂತ ಭಾವಿಸ್ತೀರಿ. ಯಾಕೆ?**

ನೋಡಿ ಸ್ವಾಮಿ, ನಾನೊಬ್ಬ ಚೋಟಾ ಲೇಖಕ. ಸಂಕೋಚವಾಗುತ್ತೆ. ಕೆಲವು ಸಣ್ಣಕತೆ ಬರೆದಿದೀನಿ– ಯಾವುದೋ ಕಾಲದಲ್ಲಿ. ಅದಕ್ಕೆ ಈಗಲೂ ಸನ್ಮಾನ ಮಾಡಬೇಕು ಅಂತ ಕನ್ನಡಿಗರು ಭಾವಿಸ್ತಾರೆ. ಜೀವನದಲ್ಲೇ ಒಂದು ಪುಸ್ತಕ ಓದಿಲ್ಲದೆ ಇರೋರು ಗೌರವ ಮಾಡ್ತಾರೆ. ನಾನು ಕರ್ನಾಟಕ ದೇಶದಲ್ಲಿ 1959ನೇ ಇಸ್ವಿಯಿಂದ ಇಲ್ಲ. ನಮ್ಮಮ್ಮ ಸಾಯೋವರೆಗೂ ಪ್ರತಿವರ್ಷ ಬರ್‍ತಾ ಇದ್ದೆ. ಇಲ್ಲಿ ಏನಾಯಿತು ನನಗೇನೂ ಗೊತ್ತಿಲ್ಲ. ಇಲ್ಲಿ ಲೇಖಕರಿಗೆ ಫಾಲೊಯಿಂಗ್ ಜಾಸ್ತಿ ಇದೆ. ಪವಾಡ ಪುರುಷ ಹೇಳುತ್ತಾ ಇದ್ದಾನೆ. ಅವನ ಮಾತನ್ನು ವೇದವಾಕ್ಯ ಅಂತ ಬರಕೋಬೇಕು ಅನ್ನೋ ಧೋರಣೆಯಿದೆ. ನನಗಿದು ಹಿಡಿಸೋಲ್ಲ.

◆ **ನಿಮ್ಮ ಬ್ಲಾಗಿನ ಬರಹದಲ್ಲಿ ಸಾವಿನ ಬಗ್ಗೆ ಯಾಕಷ್ಟು ಧ್ಯಾನ?**

ನನ್ನ ಮೇಲೆ ಇಷ್ಟೊಂದು ಕೋಪದ್ವೇಷ ಇದೆಯಾ ನಿಮಗೆ? ಈಗ ಎಷ್ಟು ಕಷ್ಟ ಹೇಳಿ ಜೀವನ. ಕೈಕಾಲು ಗಟ್ಟಿಯಿಲ್ಲ. ಮನೆಯಲ್ಲೂ ನಡೆಯಬೇಕು. ಬಿದ್ದರೆ ಕಾಲು ಮುರಿಯುತ್ತೆ ಅಂತ ಭಯ. ಸಾವು ನನಗೆ ಏನೂ ಅನಿಸೋಲ್ಲ. ಅಸ್ಸಾಮಿನಲ್ಲಿ ಜನ ಭೂಕಂಪವನ್ನ ತುಂಬಾ ನ್ಯಾಚುರಲಾಗಿ ತಗೋತಾರೆ. ಎಷ್ಟೋ ಸರ್ತಿ ನನಗೆ ಏನೋ ಒಂದು ರೀತಿ ಇದ್ದಕ್ಕಿದ್ದ ಹಾಗೆ ರಾತ್ರಿ ಎಚ್ಚರವಾಗಿ ಬಿಡ್ತಿತ್ತು. ವಿತ್ ಇನ್ ಸೆಕೆಂಡ್ಸ್. ಬಟ್ ಐ ನೆವರ್ ಗೆಟ್‌ಔಟ್. ಇಲ್ಲಿ ನಾನು ಮುದುಕ ಆಗಿದೀನಿ; ಬರಬಾರದಿತ್ತು. ಸಾಯೋದಿಕ್ಕೆ ಬಂದಿದ್ದೀನಿ ಅಷ್ಟೆ.

◆ **ಯಾಕೆ ಕರ್ನಾಟಕಕ್ಕೆ ಬರಬಾರದಿತ್ತು ಅಂತ ಭಾವಿಸ್ತೀರಿ?**

ಏನಿದೆ ಇಲ್ಲಿ? ಟೆಲ್ ಮಿ ಒನ್ ಥಿಂಗ್ ಇನ್ ಕರ್ನಾಟಕ ದಟ್ ಫೋರ್ಸ್ ಮಿ ಟು ಸ್ಟೇ, ಎಕ್ಸೆಪ್ಟ್ ಮೈ ಲವ್ ಆಫ್ ಲಾಂಗ್ವೇಜ್ ಕನ್ನಡ. ಅಸ್ಸಾಂನಲ್ಲಿ ಮೋಸ್ಟ್ ಇಂಪಾರ್ಟೆಂಟ್, ನೀವ್ಯಾರು ಅಂತ ಯಾರೂ ತಲೆಕೆಡಿಸಿಕೊಳ್ಳಲ್ಲ. ಐ ನೆವರ್ ಫೆಲ್ಟ್ ದಟ್ ಐಯಾಮ್ ಆ್ಯನ್ ಔಟ್‌ಸೈಡರ್. ಇಲ್ಲಿದ್ದರೆ ನಿನ್ನ ಜಾತಿ ಯಾವುದು ಅಂತ ಶುರುವಾಗುತ್ತದೆ. ದಲಿತರಲ್ಲಿ ಬಲಗೈ ಕಡೆಯವನೋ, ಎಡಗೈ ಕಡೆಯವನೋ ಅಂತ. ಇದೇ ಕರ್ನಾಟಕದ ವಿಶೇಷ. ಸ್ವಾಮಿ, ನಾನು ಎಂಟು ವರ್ಷ ಸೌತ್ ಆಫ್ರಿಕಾದಲ್ಲಿದ್ದೆ. ಅಲ್ಲಿ ಇಶ್ಯೂಗಳಿದ್ದವು – ಟ್ರೈಬ್‌ದು, ರೇಸ್‌ದು. ಇಂಡಿಯಾದಿಂದ ಹೋದವರಲ್ಲಿ ಹಿಂದೂ–ಮುಸ್ಲಿಮ್ ಇಶ್ಯೂ ಇತ್ತು. ಆದರೆ ಇಲ್ಲಿ ಇಷ್ಟೊಂದು ಇಶ್ಯುಗಳಿವೆಯೆಂದು ನನಗಂತೂ ಗೊತ್ತಿರಲಿಲ್ಲ. ಏನೋಪ್ಪ, ನಾನೊಂದು ರೀತಿಯಲ್ಲಿ ಮಿಸ್‌ಫಿಟ್. ನಾನೂ ಮದುವೆಯಾಗಿದ್ದು ಸಂಸಾರ ಇದ್ದಿದ್ದರೆ, ಪಾರ್ಟ್ ಆಫ್ ಸೊಸೈಟಿ ಅಂತ ಒಪ್ಪಿಕೊಳ್ಳುತಾ ಇದ್ದೆನೋ ಏನೊ? ಆದರೆ ನಾನು ಆ್ಯಂಟಿ ಸೋಶಿಯಲ್ ಪರ್ಸನ್. ಯಾರೊ ಒಬ್ಬರು ನನಗೆ ಹೇಳಿದರು, 'ನೀವು ಇಲ್ಲಿ ಇಷ್ಟು ವರ್ಷ ಇದ್ದಿರಿ. ನಿಮಗೆ ಸಾಮಾಜಿಕ ಬದ್ಧತೆ ಇದೆ. ನೀವು ಮೀಟಿಂಗಿಗೆ ಬರಬೇಕು. ಮಾತಾಡಬೇಕು' ಅಂತ. ನಾನು ಹೇಳಿದೆ, 'ಐ ಡೋಂಟ್ ಹ್ಯಾವ್ ಎ ಸೋಶಿಯಲ್ ರೆಸ್ಪಾನ್ಸಿಬಿಲಿಟಿ.' ಈಗಲೂ ಹೇಳ್ತೀನಿ, ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಇಲ್ಲ ನನಗೆ. ಇಷ್ಟೊಂದು ಇಶ್ಯೂಗಳ ನಡುವೆ ಆ ರೆಸ್ಪಾನ್ಸಿಬಿಲಿಟಿ ಯಾಕೆ ತೋರಿಸಬೇಕು? ಹತ್ತು ಪೇಜ್ ಬರೆಯೊ ಕ್ಷಮತೆ ಇದೆ ನನಗೆ, ಕನ್ನಡದಲ್ಲಿ. ನನಗೆ ಕೋಪ ಅಹಂಕಾರ ಇರಬಹುದು. ಸ್ನಾಬರಿ ಇರಬಹುದು. ಒಪ್ಪಿಕೋತೇನೆ. ನಾನು ಇರೋದೇ ಈ ಥರ.

4

ನಾನು ಪ್ರಭಾಕರ್ ಅವರ ಮೊದಲ ಭೇಟಿಯ ಕಾಲಕ್ಕೆ, ಅರವತ್ತು ವರ್ಷಗಳ ಹಿಂದೆ ಊರು ಬಿಟ್ಟಿದ್ದ ಅವರು, ಖಂಡಾಂತರಗಳನ್ನು ತಿರುಗಾಡಿ ಕೋಲಾರಕ್ಕೆ ಮರಳಿ, ತಮ್ಮ ಪೂರ್ವಜರ ಹಳಗಾಲದ ದೊಡ್ಡ